ಮೂಲ ದಾವಾ ಸಂಖ್ಯೆ. 88/2015 ಸಿ ಡಬ್ಲ್ಯೂ 1

(ದಿನಾಂಕ 27-11-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಪಾಟೀ ಸವಾಲುಃ ವಾದಿ ಪರ ಶ್ರೀ ಹೆಚ್ ಬಿ ಆರ್ ವಕೀಲರಿಂದಃ-

ನಾನು ಸರ್ವೆ ಇಲಾಖೆಯಲ್ಲಿ ಕರ್ತವ್ಯಕ್ಕೆ ಸೇರಿ ಸುಮಾರು 28 ವರ್ಷವಾಗಿರುತ್ತದೆ. ದಿಃ08-03-2021 ರಂದು ಎ ಡಿ ಎಲ್ ಆರ್ ಆಗಿ ಹೆಚ್ ಬಿ ಹಳ್ಳಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ಸರ್ವೆ ಕಾರ್ಯ ನಿರ್ವಹಿಸಲು ತಾಲ್ಲೂಕ ಸರ್ವೆಯರ್ ಮತ್ತು ಪುರಸಭೆ ಮುಖ್ಯಾಧಿಕಾರಿ ಇವರ ಸಹಾಯ ಪಡೆಯಲು ನ್ಯಾಯಾಲಯದ ನಿರ್ದೇಶನ ಇತ್ತು ಅದರಂತೆ ಅವರು ಆ ದಿನ ಉಪಸ್ಥಿತರಿದ್ದರು. ಅದೇ ರೀತಿ ಈ ದಾವೆಯಲ್ಲಿ ವಾದಿ ಮತ್ತು ಪ್ರತಿವಾದಿಯರು ಸಲ್ಲಿಸಿದ ಮೆಮೋ ಆಫ್ ಇನ್ಸಟ್ರಕ್ಷನ್ ತಲುಪಿರುತ್ತದೆಂದರೆ ಸರಿ. ಮೆಮೋ ಆಫ್ ಇನ್ಸಟ್ರಕ್ಷನ್‌ಗಳನ್ನು ಪರಿಗಣಿಸಿ ಅಳತೆ ಕಾರ್ಯ ನಿರ್ವಹಿಸಿರುತ್ತೇನೆ. ನಾನು ಸರ್ವೆ ಕಾರ್ಯಕ್ಕಾಗಿ 4 ಬಾರಿ ಸರ್ವೆ ಕೆಲಸವನ್ನು ನಿಗಧಿಪಡಿಸಿದ್ದೆ ಎಂದರೆ ಸರಿಯಲ್ಲ. ಎರಡು ಬಾರಿ ನಾನು ಸರ್ವೆ ಕೆಲಸಕ್ಕಾಗಿ ದಿನಾಂಕ ನಿಗಧಿ ಮಾಡಿರುತ್ತೇನೆ. ಅವುಗಳೆಂದರೆ ದಿಃ 18-12-2023 ಮತ್ತು 03-01-2024 ಇರುತ್ತದೆ. ನೀವು ದಿನಾಂಕಃ23-12-2023 ಮತ್ತು 19-01-2024 ರಂದು ಸರ್ವೆ ಕೆಲಸವನ್ನು ಮಾಡಿದ್ದೀರಾ ಎಂದರೆ ಸಾಕ್ಷಿಯು ದಿಃ23-12-2023 ರಂದು ನಾನು ಸರ್ವೆ ಕೆಲಸಕ್ಕೆ ಹೋಗಿಲ್ಲ, ದಿಃ19-01-2024 ರಂದು ಹೋಗಿದ್ದೆ ಇಲ್ಲ ಎನ್ನುವುದರ ಬಗ್ಗೆ ನನಗೆ ನೆನಪಿಲ್ಲ.

ಯಾವುದೇ ಒಂದು ಸರ್ವೆ ಕಾರ್ಯವನ್ನು ನಿರ್ವಹಿಸಬೇಕಾದರೆ ಸರ್ವೆ ಮಾಡುವ ದಿನದಿಂದ 15 ದಿನ ಮುಂಚಿತವಾಗಿ ವಾದಿ, ಪ್ರತಿವಾದಿ ಮತ್ತು ಅವರ ಪರ ವಕೀಲರುಗಳಿಗೆ ಹಾಗೂ ನ್ಯಾಯಾಲಯದ ಆದೇಶದಂತೆ ನಮಗೆ ಸಹಾಯ ಮಾಡುವ ಅಧಿಕಾರಿಗಳಿಗೆ ನೋಟಿಸನ್ನು ಕೊಟ್ಟು ಸರ್ವೆ ನಿರ್ವಹಿಸಬೇಕಂತ ಸರ್ವೆ ಮ್ಯಾನುಯಲ್‌ನಲ್ಲಿದೆ ಎಂದರೆ ಸರಿ ಸಾಕ್ಷಿ ಮುಂದುವರೆದು ಸರ್ವೆ ಇಲಾಖೆಯ ಸುತ್ತೋಲೆಯ ಪ್ರಕಾರ ಒಂದು ವಾರ ಮುಂಚಿತವಾಗಿ ನೋಟೀಸು ಕೊಡುವುದು ಇರುತ್ತದೆನ್ನುತ್ತಾರೆ. ಸದರಿ 8 ದಿವಸ ಮುಂಚಿತವಾಗಿ ನೋಟೀಸನ್ನು ಲಿಖಿತ ರೂಪದಲ್ಲಿ ನೀಡಬೇಕಾಗಿರುತ್ತದೆ. ಎರಡು ಸಾರಿ ನೋಟೀಸನ್ನು ಖುದ್ದಾಗಿ ಜಾರಿ ಮೂಡಿರುತ್ತೇನೆ. ಮೊದಲನೇ ಸಾರಿ ನೋಟೀಸನ್ನು ನಾನು ವಾದಿ ಮತ್ತು 1ನೇ ಪ್ರತಿವಾದಿಗೆ ನೀಡಿದ್ದು ಸದರಿ ನೋಟೀಸ್ ಪಡೆದ ಬಗ್ಗೆ ಅವರಿಬ್ಬರು ಮಾತ್ರ ಸಹಿ ಮಾಡಿರುತ್ತಾರೆ. ಎರಡನೇ ಸಾರಿ ನೋಟೀಸನ್ನು ವಾದಿ ಮತ್ತು 1 ಮತ್ತು 2ನೇ ಪ್ರತಿವಾದಿ ಪಡೆದು ಸಹಿ ಮಾಡಿರುತ್ತಾರೆ. ಸದರಿ ನೋಟೀಸ್ 3ನೇ ಪ್ರತಿವಾದಿಗೆ ನೀಡಿದ್ದು ಅವರ ಪರವಾಗಿ ಅನ್ವರ್ ಸಾಬ್ ಇವರು ನೋಟೀಸ್ ಪಡೆದ ಬಗ್ಗೆ ಸಹಿ ಮಾಡಿರುತ್ತಾರೆ. ಪ್ರತಿವಾದಿಯರು ನ್ಯಾಯಾಲಯಕ್ಕೆ ಸಲ್ಲಿಸಿದ

ಮೆಮೋಆಫ್ ಇನ್ಸಟ್ರಕ್ಷನ್ ಕ್ರಮ ಸಂಖ್ಯೆ: 4 ರಲ್ಲಿ ವಾದಿ ಮತ್ತು ಪ್ರತಿವಾದಿಯರ ವಕೀಲರ ಸಮಕ್ಷಮದಲ್ಲಿ ಅಳತೆ ಕಾರ್ಯ ನಿರ್ವಹಿಸಬೇಕಂತಾ ವಿನಂತಿಸಿಕೊಂಡಿದ್ದು ಇರುತ್ತದೆಂದರೆ ಸರಿ. ನಾನು ಸದರಿ ಉಭಯ ಪಕ್ಷಕಾರರ ವಕೀಲರುಗಳಿಗೆ ಸರ್ವೆ ಕಾರ್ಯದ ಸಮಯದಲ್ಲಿ ಹಾಜರಿರುವಂತೆ ನೋಟೀಸನ್ನು ನೀಡಿರುವುದಿಲ್ಲ. ಸಾಕ್ಷಿ ಮುಂದುವರೆದು ನನಗೆ ಅವರ ವಿಳಾಸಗಳು ಗೊತ್ತಿಲ್ಲದ ಕಾರಣ ನೋಟೀಸ್ ನೀಡಿಲ್ಲವೆನ್ನುತ್ತಾರೆ. ನೀವು ಮೊದಲನೇ ಸಾರಿ ಕಮಿಷನರ್ ಕಾರ್ಯ ನಿರ್ವಹಿಸಲು ಹೋದಾಗ ಉಭಯ ಪಕ್ಷಕಾರರ ವಕೀಲರ ಹೆಸರು ಮತ್ತು ವಿಳಾಸಗಳನ್ನು ಪಕ್ಷಗಾರರಿಂದ ತಿಳಿದುಕೊಳ್ಳಲು ಪ್ರಯತ್ನಿಸಿದ್ರಾ ಎಂದರೆ ಸಾಕ್ಷಿಯು ಅದರ ಅವಶ್ಯಕತೆ ನನಗೆ ಅನಿಸಲಿಲ್ಲವೆನ್ನುತ್ತಾರೆ. ಸರ್ವೆ ಕಾರ್ಯ ನಿರ್ವಹಿಸುವ ಪೂರ್ವದಲ್ಲಿ ಉಭಯ ಪಕ್ಷಗಾರರು ನ್ಯಾಯಾಲಯಕ್ಕೆ ಸಲ್ಲಿಸಿದ ಮೊಮೋ ಆಫ್ ಇನ್ಸಟ್ರಕ್ಷನ್ ಗಳನ್ನು ಸರಿಯಾಗಿ ನೋಡಿ ತಿಳಿದು ಮನಗಂಡಿರುತ್ತೇನೆ. ಮುಖ್ಯಾಧಿಕಾರಿ ಮತ್ತು ತಾಲ್ಲೂಕು ಸರ್ವೆಯರ್ ರವರಿಗೆ ನೋಟೀಸನ್ನು ನೀಡಿದ್ರಾ ಎಂದರೆ ಸಾಕ್ಷಿಯು ಮುಖ್ಯಾಧಿಕಾರಿಯವರಿಗೆ ನೋಟೀಸ್ ನೀಡಿದ್ದೇನೆ ತಾಲ್ಲೂಕಾ ಸರ್ವೆಯರ್ ನಮ್ಮ ಅಧೀನದ ಸಿಬ್ಬಂದಿಯಾಗಿರುವುದರಿಂದ ಅವರಿಗೆ ಮೌಖಿಕವಾಗಿ ತಿಳಿಸಿರುತ್ತೇನೆ, ನೋಟೀಸ್ ಕೊಡುವ ಅವಶ್ಯಕತೆ ಬರಲಿಲ್ಲವೆನ್ನುತ್ತಾರೆ. ದಿ:12-12-2023 ರಂದು ಮತ್ತು ದಿ:27-12-2023 ರಂದು ಪುರಸಭೆಯವರು ನೋಟೀಸನ್ನು ಪಡೆದಿರುತ್ತಾರೆ. ಸದರಿ ಪುರಸಭೆ ಮುಖ್ಯಾಧಿಕಾರಿಗಳು ಮತ್ತು ತಾಲ್ಲೂಕಾ ಸರ್ವೆಯರ್ ರವರು ನಿಮ್ಮ ಸಂಪೂರ್ಣ ಸರ್ವೆ ಕೆಲಸ ಮುಗಿಯುವವರೆಗೂ ಹಾಜರಿದ್ರಾ ಎಂದರೆ ಸಾಕ್ಷಿಯು ದಿ: 18-12-2023 ರ ಅಳತೆಯಂದು ಮುಖ್ಯಾಧಿಕಾರಿಯರು ಸಂಪೂರ್ಣ ಕಾರ್ಯ ಮುಗಿಯುವವರೆಗೂ ಹಾಜರಿದ್ದರು ಮತ್ತು ತಾಲ್ಲೂಕು ಸರ್ವೆಯರ್ ಸಹಾ ಹಾಜರಿದ್ದರು, ದಿ: 03-01-2024 ರಂದು ಪುರಸಭೆ ಮುಖ್ಯಾಧಿಕಾರಿಯ ಪರವಾಗಿ ಕಂದಾಯ ನಿರೀಕ್ಷಕರು ಹಾಜರಿದ್ದರು ಮತ್ತು ತಾಲ್ಲೂಕು ಸರ್ವೆಯರ್ ಸಹಾ ಹಾಜರಿದ್ದರು. ತಾಲ್ಲೂಕಾ ಸರ್ವೆಯರ್ ಇವರು ತಹಶೀಲ್ದಾರ್ ರವರ ಅಧೀನದಲ್ಲಿರುವ ಸಿಬ್ಬಂದಿ ಎಂದರೆ ಸರಿಯಲ್ಲ. ತಾಲೂಕಾ ಸರ್ವೆ ಇಲಾಖೆಗೆ ಎ ಡಿ ಎಲ್ ಆರ್ ಮುಖ್ಯಸ್ಥರು ಎಂದರೆ ಸರಿ, ತಾಲ್ಲೂಕು ಕಂದಾಯ ಇಲಾಖೆಗೆ ತಹಶೀಲ್ದಾರ್ ಮುಖ್ಯಸ್ಥರು ಎಂದರೆ ಸರಿ.

ದಾವಾಸ್ತಿಯ ಉತ್ತರಕ್ಕೆ ಮತ್ತು ಪೂರ್ವಕ್ಕೆ ೬೦ ಅಡಿಯ ರಸ್ತೆ ಇದೆ ಎಂದರೆ ಸರಿ. ಸದರಿ ೬೦ ಅಡಿ ರಸ್ತೆ ಸಂಪೂರ್ಣ ಲೇಔಟಿಗೆ ಸಂಬಂಧಪಟ್ಟಿದ್ದು. ದಾವಾಸ್ತಿಯು ವಿನ್ಯಾಸಕ್ಕೆ ಒಳಗೊಂಡ ವಿನ್ಯಾಸದಲ್ಲಿದ್ದಂತಹ ಒಂದು ನಿವೇಶನ ಎಂದರೆ ಸರಿ. ನಾನು ಸದರಿ ವಿನ್ಯಾಸದ ದಾಖಲಾತಿಗಳ ಅಧಿಕಾರಿಯಲ್ಲವೆಂದರೆ ಸರಿ. ಸದರಿ ವಿನ್ಯಾಸಕ್ಕೆ ಸಂಬಂಧಿಸಿದ ದಾಖಲೆಗಳನ್ನು

ಪಡೆಯಬೇಕಾದರೆ ನಾನು ಪುರಸಭೆ ಮುಖ್ಯಾಧಿಕಾರಿಗಳ ಬಳಿ ಪಡೆಯಬೇಕು. ಸದರಿ ವಿನ್ಯಾಸದ ನಕಾಶೆಯನ್ನು ಸರ್ವೆ ಸಮಯದಲ್ಲಿ ಅಥವಾ ಅದಕ್ಕಿಂತ ಪೂರ್ವದಲ್ಲಿ ನೀವು ಪುರಸಭೆ ಮುಖ್ಯಾಧಿಕಾರಿಗಳಿಗೆ ಸದರಿ ವಿನ್ಯಾಸದ ನಕಾಶೆಯನ್ನು ನಿಮಗೆ ನೀಡುವಂತೆ ಕೇಳಿಕೊಂಡಿದ್ದೀರಾ ಎಂದರೆ ಸಾಕ್ಷಿಯು ಕೇಳಿದ್ದೇನೆ ಎನ್ನುತ್ತಾರೆ. ನಾನು ಸ್ಪಷ್ಟವಾಗಿ ವಿನ್ಯಾಸದ ನಕಾಶೆಯನ್ನು ತರಲು ಪುರಸಭೆಯವರಿಗೆ ತಿಳಿಸಿರುವುದಿಲ್ಲ ಆದರೆ ಸಂಬಂಧಪಟ್ಟ ದಾಖಲೆಗಳನ್ನು ತರಲು ತಿಳಿಸಿರುತ್ತೇನೆ. ಪುರಸಭೆಯವರು ನನಗೆ ವಿನ್ಯಾಸದ ನಕ್ಷೆಯನ್ನು ನೀಡಿದ್ದು ಖಾತಾ ಸಂಖ್ಯೆಯನ್ನು ತಿಳಿಸಿದರು. ನನ್ನ ವರದಿಯೊಂದಿಗೆ ಹಾಜರುಪಡಿಸಿದ ಪುಟ ನಂ.24 ರಲ್ಲಿರುವ ನಕಾಶೆ ಸಂಪೂರ್ಣ ವಿನ್ಯಾಸದ ನಕಾಶೆ ಇರುವುದಿಲ್ಲವೆಂದರೆ ಸರಿ ಸಾಕ್ಷಿ ಮುಂದುವರೆದು ನನಗೆ ಅವಶ್ಯಕತೆ ಇದ್ದ ಭಾಗ ಮಾತ್ರ ಪಡೆದಿದ್ದೇನೆ ಎನ್ನುತ್ತಾರೆ. ನಾನು ನೋಡಿರುವಂತಹ ಅಥವಾ ಪಡೆದಿರುವಂತಹ ವಿನ್ಯಾಸದ ನಕಾಶೆ ಸರ್ವೆ ಸ್ಕೇಲ್ ಪ್ರಕಾರ ಇರುತ್ತದೆಂದರೆ ಸರಿ.

ಅಭಿವೃದ್ಧಿ ಹೊಂದಿದ ನಿವೇಶನಗಳನ್ನು ಸರ್ವೆ ಮಾಡಲು ಸೂಕ್ತ ಅಧಿಕಾರಿಗಳು ನಿಮ್ಮ ಪ್ರಕಾರ ಯಾರು ಎಂದರೆ ಸಾಕ್ಷಿಯು ಕೆ ಜೆ ಪಿ ದಾಖಲೆಯಾಗಿದ್ದರೆ ಎ ಡಿ ಎಲ್ ಆರ್ ರವರು ಸೂಕ್ತ ಅಧಿಕಾರಿಗಳು. ದಾವಾಸ್ತಿಯನ್ನು ಸರ್ವೆ ಮಾಡಲು ನಿಮ್ಮ ಪ್ರಕಾರ ಸೂಕ್ತ ವ್ಯಕ್ತಿ ಯಾರು ಎಂದರೆ ಸಾಕ್ಷಿಯು ಇದು ಕೆ ಜೆ ಪಿ ಯಾಗದೇ ಇರುವುದರಿಂದ ಸೂಕ್ತ ವ್ಯಕ್ತಿ ಯಾರೂ ಇರುವುದಿಲ್ಲವೆನ್ನುತ್ತಾರೆ. ದಾವಾಸ್ತಿಯ ಪೂರ್ವ ಮತ್ತು ಉತ್ತರದ ಕಡೆ ಇರುವ 60 ಅಡಿ ಅಗಲದ ರಸ್ತೆಯ ಎರಡೂ ಬದಿಗೆ ಚರಂಡಿ ಇದೆ. ಸದರಿ ಚರಂಡಿಗಳು ಲೇಔಟ್ ಆದ ಸಮಯದಲ್ಲಿ ಆಗಿರುವಂತಹ ಚರಂಡಿ ಎಂದರೆ ನನಗೆ ಮಾಹಿತಿ ಇಲ್ಲ. ಸದರಿ ಚರಂಡಿಯು 60 ಅಡಿ ರಸ್ತೆಯ ಒಳಗೆ ಬಂದಿರುತ್ತದೆ. ದಾವಾಸ್ತಿ 258 ಮತ್ತು ಇದಕ್ಕೆ ಇರತಕ್ಕ ಸಂಪೂರ್ಣ ಬ್ಲಾಕನ್ನು ಅಳತೆ ಮಾಡಿದ್ದೇನೆ. ನೀವು ಸದರಿ ಬ್ಲಾಕನ್ನು ಯಾವ ಅಳತೆಯ ಪಾಯಿಂಟಿನಿಂದ ನಿಗಧಿಪಡಿಸಿರುತ್ತೀರಿ ಎಂದರೆ ಸಾಕ್ಷಿಯು ಬಿಂದುಗಳು ನಿರ್ವಹಣೆಯಾದ ಕಾರಣ ಅಲ್ಲಿ ಅಳತೆ ಪಾಯಿಂಟ್ ಇರುವುದಿಲ್ಲ. ನೀವು ಸರ್ವೆ ಮಾಡುವ ಪೂರವದಲ್ಲಿ ಲೇಔಟ್ ನಕಾಶೆಗೆ ಸೆಟಲೈಟ್ ನಕಾಶೆ ಮೂಲಕ ಹೊಂದಾಣಿಕೆ ಮಾಡಿಕೊಂಡು ಅಳತೆ ಮಾಡಿದ್ದೀರಾ ಎಂದರೆ ಸಾಕ್ಷಿಯು ಸೆಟಲೈಟ್ ಅಳತೆಗೆ ಬೇಕಾಗಿರುವ ನಿರ್ದೇಶಾಂಕ ಬಿಂದುಗಳ ದಾಖಲೆಗಳು ಇರುವುದಿಲ್ಲ ಆದ್ದರಿಂದ ಹೊಂದಾಣಿಕೆ ಮಾಡಿಕೊಂಡಿಲ್ಲ. ನಿಮಗೆ ಪುರಸಭೆಯವರು ನೀಡಿರುವಂತಹ ವಿನ್ಯಾಸದ ನಕಾಶೆ ಯಾವ ರೀತಿ ಅನುಕೂಲವಾಯಿತು ಎಂದರೆ ಸಾಕ್ಷಿಯು ವಿನ್ಯಾಸದ ನಕ್ಷೆ ಹಾಗೂ ಅನುಭವದಂತೆ ಇರುವ ಗೆರೆಗಳನ್ನು ಹೊಲಿಸಿ ಅಳತೆ ಕೆಲಸ ಮಾಡಿರುತ್ತೇನೆ. ರಸ್ತೆಯ ಅಗಲದ ಬಗ್ಗೆ ನಾನು ವರದಿಯಲ್ಲಿ

ಮೂಲ ದಾವಾ ಸಂಖ್ಯೆ. 88/2015 ಸಿ ಡಬ್ಲ್ಯೂ 1

ತಿಳಿಸಿರುತ್ತೇನೆ. ದಾವಾಸ್ತಿಯ ಮುಂದಿರುವ 60 ಅಡಿ ಅಗಲದ ರಸ್ತೆ ಇರುವ ಚರಂಡಿಯನ್ನು ದಾಟಿ ಕಟ್ಟಡವನ್ನು ಕಟ್ಟಿದ್ದಾರಾ ಎಂದರೆ ಸಾಕ್ಷಿಯು ಹಾಲೀ ಸ್ಥಿತಿಯಲ್ಲಿ ಯಾರೂ ಅತಿಕ್ರಮಣ ಮಾಡಿಲ್ಲವೆನ್ನುತ್ತಾರೆ. ದಾವಾಸ್ತಿಯ ಉತ್ತರ ದಿಕ್ಕಿಗೆ ಇರುವ ರಸ್ತೆ ಮಹತ್ಮಾಗಾಂಧಿ ರಸ್ತೆ ಅಂತಾ ಕರೆಯುತ್ತಾರೆಂದರೆ ನನಗೆ ಗೊತ್ತಿಲ್ಲ. ಸದರಿ ರಸ್ತೆಗೆ ತೇರು ಬೀದಿ ರಸ್ತೆ ಅಂತಾಲೂ ಕರೆಯುತ್ತಾರೆಂದರೆ ನಾನು ಅದನ್ನು ಕೇಳಿದ್ದೇನೆ ಎನ್ನುತ್ತಾರೆ. ದಾವಾಸ್ತಿಗೆ ಸಂಬಂಧಿಸಿದ ಬ್ಲಾಕಿನ ಉತ್ತರ, ಪೂರ್ವ ಮತ್ತು ದಕ್ಷಿಣ ರಸ್ತೆಗಳನ್ನು ಅಳತೆ ಮಾಡಿರುತ್ತೇನೆಂದರೆ ಸರಿ. ಸದರಿ ಮೂರು ರಸ್ತೆಗಳು 60 ಅಡಿ ರಸ್ತೆಗಳು ಇರುತ್ತದೆಂದರೆ ಸಾಕ್ಷಿಯು ಪೂರ್ವ ಮತ್ತು ಉತ್ತರ ಭಾಗದ ರಸ್ತೆ 60 ಅಡಿ ರಸ್ತೆ ಇರುತ್ತದೆ ದಕ್ಷಿಣ ಭಾಗದ ರಸ್ತೆ 40 ಅಡಿ ಇರುತ್ತದೆ. ಸದರಿ 40 ಅಡಿ ರಸ್ತೆಗೆ ಎರಡೂ ಕರೆ ಚರಂಡಿ ಇರುತ್ತದೆಂದರೆ ಸರಿ. ಪ್ಲಾಟ್ ನಂ.258 ಮತ್ತು 268 ನೇ ಪ್ಲಾಟುಗಳ ತಲಾ 100 )( 45 ಅಡಿ ಅಳತೆಯ ಪ್ಲಾಟುಗಳು ಎಂದರೆ ಸರಿ. ದಾವಾಸ್ತಿಯ 258 ನೇ ಪ್ಲಾಟಿನ ಉತ್ತರ ಪೂರ್ವದ ಈಶಾನ್ಯ ದಿಕ್ಕಿನ ಬಿಂದುವನ್ನು ನಿಗಧಿಪಡಿಸಲು ಸದರಿ ದಾವಾಸ್ತಿ 258 ನೇ ಪ್ಲಾಟಿನ ದಕ್ಷಿಣ ದಿಕ್ಕಿಗೆ ಇರುವ 268 ಪ್ಲಾಟಿನ ದಕ್ಷಿಣ ಪೂರ್ವ ಆಗ್ನೇಯ ದಿಕ್ಕಿನ ಬಿಂದುವಿನಿಂದ ಅಳತೆ ಮಾಡಿ ದಾವಾಸ್ತಿಯ ಉತ್ತರ ಈಶಾನ್ಯ ಬಿಂದುವನ್ನು ನಿಗಧಿಪಡಿಸಬೇಕಾಗುತ್ತದೆಂದರೆ ಸಾಕ್ಷಿ ಅಲ್ಲಿ ಯಾವುದೇ ಬಿಂದುಗಳು ಇಲ್ಲದ ಕಾರಣ ಅನುಭವದಂತೆ ಬಿಂದುವನ್ನು ನಿಗಧಿ ಮಾಡಿರುತ್ತೇನೆ ಎನ್ನುತ್ತಾರೆ. ಸದರಿ ಪ್ಲಾಟ್ ನಂ. 258 ಮತ್ತು 268 ರ ಉ-ದ ವಾಗಿ ಅಳತೆ ಕಾರ್ಯ ಮಾಡಿರುತ್ತೇನೆ.

(ಈ ಹಂತದಲ್ಲಿ ವಾದಿ ಪರ ವಕೀಲರ ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ನೀಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ